ದಿನಾಂಕಃ 02-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿ ಸವಾಲುಃ–** ದರಖಾಸ್ತದಾರರ ಪರ ಶ್ರೀ ಎ ಎ ಜಿ ವಕೀಲರಿಂದ

ನನ್ನ ಸಾಕ್ಷಿ ವಿಚಾರಣೆ ಪ್ರಮಾಣಪತ್ರದಲ್ಲಿ ಬರೆದ ವಿಷಯಗಳ ಮಾಹಿತಿ ನನಗೆ ಇದೆ. ಮಂಜುನಾಥ ನನ್ನ ತಮ್ಮ ಹಾಗೂ ಪರಮೇಶ್ವರ ನನ್ನ ಅಣ್ಣ. ನನ್ನ ಅಣ್ಣ ಪರಮೇಶ್ವರ ರಿ ಸ ಸಂಖ್ಯೆ 15 ರಲ್ಲಿ 10 ಎಕರೆ ಜಮೀನನ್ನು ಜಾಕೀರಹುಸೇನರವರಿಗೆ ಮಾರಾಟ ಮಾಡಿರುವುದು ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ತಕರಾರು ಹಾಕಲು ಜಮೀನು ಮಾರಾಟ ಆಗಿರುವ ವಿಷಯ ಯಾವಾಗ ಗೊತ್ತಾಯಿತು ಎಂಬ ಪ್ರಶ್ನೆಗೆ ಸಾಕ್ಷಿಯು ಜಮೀನು ಪೋಡಿ ಮಾಡಲು ಬಂದಾಗ ವಿಚಾರಣೆ ಮಾಡಿದ ನಂತರ ಮಾರಾಟದ ವಿಷಯ ಗೊತ್ತಾಯಿತು ಎಂದು ನುಡಿದಿದ್ದಾರೆ. ನನ್ನ ಅಣ್ಣ ಪರಮೇಶ್ವರ ಚೌಡಾಳ ಗ್ರಾಮದ ತನ್ನ ಮಾಲ್ಕೀ ಜಮೀನು ರಿ ಸ ಸಂಖ್ಯೆ 15 ರಲ್ಲಿ 10 ಎಕರೆ ಜಮೀನಿಗೆ ಸಂಬಂಧಪಟ್ಟಂತೆ ರೂ. 13 ಲಕ್ಷಗಳಿಗೆ ಮಾರಾಟ ಮಾಡಲು ಒಪ್ಪಿ ಕೊಂಡು ಜಾಕೀರಹುಸೇನರವರಿಗೆ ಖರೀದಿ ಕರಾರುಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಂಚಕಾರ ಪತ್ರದ ಪ್ರಕಾರ ಪರಮೇಶ್ವರ ರೂ. 9 ಲಕ್ಷ ಪಡೆದುಕೊಂಡು ಬಾಕಿ ರಕಂ ರೂ. 4 ಲಕ್ಷ ಖರೀದಿ ಪತ್ರದ ಸಮಯದಲ್ಲಿ ಪಡೆದುಕೊಳ್ಳುವುದಾಗಿ ಒಪ್ಪಿ ಕೊಂಡಿದ್ದನು ಎಂದರೆ ಸರಿಯಲ್ಲ.

ಸಂಚಕಾರ ಪತ್ರದ ಪ್ರಕಾರ ಪರಮೇಶ್ವರ ಖರೀದಿ ಪತ್ರ ಬರೆದುಕೊಡದಿರುವ ಕಾರಣ ಜಾಕೀರಹುಸೇನ ಜಹಾಂಗೀರ ಖರೀದಿ ಪತ್ರ ಬರೆದುಕೊಡಲು ಕೋರಿ

ಅಸಲು ದಾವಾ ಸಂಖ್ಯೆ 75/2013 ದಾಖಲಿಸಿ ಡಿಕ್ರಿ ಪಡೆದುಕೊಂಡಿದ್ದಾರೆ ಎಂದರೆ ಅದೆಲ್ಲ ಸುಳ್ಳು. ಸದರಿ ಡಿಕ್ರಿ ಆಧಾರದ ಮೇಲೆ ಜಾಕೀರಹುಸೇನ ಜಹಾಂಗೀರ ನ್ಯಾಯಾಲಯದ ನಿಯೋಗಿ ಮುಖಾಂತರ ಈ ದರಖಾಸ್ತನಲ್ಲಿ ಖರೀದಿ ಪತ್ರ ನೊಂದ್ ಮಾಡಿಸಿಕೊಂಡ ಪ್ರಕಾರ ಅವರ ಹೆಸರು ದಾಖಲಾತಿಗಳಲ್ಲಿ ನಮೂದಿಸಲಾಗಿದೆ ಎಂದರೆ ಆ ಆಸ್ತಿ ಪಿತ್ರಾರ್ಜಿತ ಆಸ್ತಿ.

ಚೌಡಾಳ ಗ್ರಾಮದ ರಿ ಸ ಸಂಖ್ಯೆ 15 ರ 2012-13 ರ ಉತಾರದಲ್ಲಿ ಕುಂದಗೋಳ ಪರಮೇಶ್ವರ ಮಹದೇವಪ್ಪ ಎಂದು ದಾಖಲ ಇದೆ ಎಂದರೆ ಸರಿ. ಸದರಿ ಉತಾರದಲ್ಲಿ ನನ್ನ ಹೆಸರು ಹಾಗೂ ನನ್ನ ತಮ್ಮನಾದ ಮಂಜುನಾಥ ಹೆಸರು ದಾಖಲ ಇಲ್ಲ ಎಂದರೆ ಸರಿ. ರಿ ಸ ಸಂಖ್ಯೆ 15/2 ರ 2022-23 ರ ಉತಾರದಲ್ಲಿ ಜಾಕೀರಹುಸೇನ ಜಹಾಂಗೀರ ಬಿನ್ ಬಾಬಾಹುಸೇನ ಎಂದು ದಾಖಲಿಸಲಾಗಿದೆ ಎಂದರೆ ಸರಿ. ಜಾಕೀರಹುಸೇನ ಹಾಗೂ ನನ್ನ ಅಣ್ಣ ಪರಮೇಶ್ವರ ಮೀಲಾಪಿ ಆಗಿದ್ದರೆ ನನ್ನ ಅಣ್ಣ ನೇರವಾಗಿ ಜಾಕೀರಹುಸೇನ ಹೆಸರಿಗೆ ಖರೀದಿ ಪತ್ರ ಬರೆದುಕೊಡುತ್ತಿದ್ದ ಹಾಗು ಜಾಕೀರಹುಸೇನಗೆ ದಾವೆ ಹಾಗೂ ಈ ದರಖಾಸ್ತ ದಾಖಲಿಸುವ ಅವಶ್ಯಕತೆ ಇರುತ್ತಿರಲಿಲ್ಲ ಎಂದರೆ ಅದು ಯಾವುದು ನನಗೆ ಗೊತ್ತಿಲ್ಲ. ದರಖಾಸ್ತುದಾರ ಹಾಗೂ ತೀರ್ಪುಖುಣಿಗಳು ಮೀಲಾಪಿಯಾಗಿದ್ದಾರೆ ಎಂದು ನನ್ನ ಅನುಕೂಲಕ್ಕೆ ತಕ್ಕಂತೆ ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

ಚೌಡಾಳ ಗ್ರಾಮದ ಡ ಸಂಖ್ಯೆ 876 ಈ ಪ್ರಕರಣಕ್ಕೆ ಸಂಬಂಧಪಟ್ಟಿದ್ದು ಅಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಈ ಹಿಂದೆಯೇ ವಾಟ್ನಿ ಆಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಆಸ್ತಿಗಳಲ್ಲಿ ವಾಟ್ನಿ ಆಗಿಲ್ಲ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೆನೆ. ಸಾಕ್ಷಿಯು ಸ್ವತಃ 2022 ರಲ್ಲಿ ನಮ್ಮ ಕುಟುಂಬದ ಆಸ್ತಿಗಳಿಗೆ ಸಂಬಂಧಪಟ್ಟಂತೆ ಕೋರ್ಟ ಡಿಕ್ರಿ ಆಗಿದೆ ಎಂದು ನುಡಿದಿದ್ದಾರೆ. ಅಸಲು ದಾವಾ ಸಂಖ್ಯೆ 75/2013 ರಲ್ಲಿ ನಾವು ಪಾರ್ಟಿ ಆಗಲು ಪ್ರಯತ್ನಪಟ್ಟಿರುವುದಿಲ್ಲ. ಆ ಕೇಸಿನಲ್ಲಿ ಪಾರ್ಟಿ ಆಗಿ ನಮ್ಮ ತಕರಾರು ಸಲ್ಲಿಸಲು ನಮಗೆ ತೊಂದರೆ ಇರಲಿಲ್ಲ ಎಂದರೆ ಆ ಕೇಸಿನ ಬಗ್ಗೆ ನಮಗೆ ಗೊತ್ತಿರಲಿಲ್ಲ. ಅಸಲು ದಾವಾ ಸಂಖ್ಯೆ 75/2013 ರಲ್ಲಿ ಆದಂತಹ ತೀರ್ಪು ಮತ್ತು ಡಿಕ್ರಿಯನ್ನು ನಾನು, ನನ್ನ ಅಣ್ಣ ಹಾಗೂ ನನ್ನ ತಮ್ಮ ಇವತ್ತಿನವರೆಗೂ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎಂದರೆ ಅದು ನಮಗೆ ಗೊತ್ತಿಲ್ಲ ಹಾಗೂ ಸುಳ್ಳು.

ಈ ಪ್ರಕರಣದಲ್ಲಿ ಪೋಡಿ ಮಾಡಲು ತಹಶೀಲ್ದಾರ ನೋಟಿಸ ಕೊಟ್ಟ ನಂತರ ನಮಗೆ ವಿಷಯ ಗೊತ್ತಾಗಿ ತಕರಾರು ಅರ್ಜಿ ಸಲ್ಲಿಸಿರುತ್ತೇವೆ. ತಹಶೀಲ್ದಾರ ಕೊಟ್ಟಂತಹ ನೋಟಿಸನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ. ಅಸಲು ದಾವಾ ಸಂಖ್ಯೆ 21/2020 ಹಾಗೂ ಎಫಡಿಪಿ ಸಂಖ್ಯೆ 10/2022 ರಲ್ಲಿ ಜಾಕೀರಹುಸೇನ ಪಾರ್ಟಿ ಇಲ್ಲ ಎಂದರೆ ಸಾಕ್ಷಿಯು ಯಾವುದೇ ಉತ್ತರ ನೀಡಿಲ್ಲ. ದರಖಾಸ್ತದಾರರಿಗೆ ದಾವಾ

ಜಮೀನಿನ ಕಬ್ಜೆ ಕೊಡಬಾರದು ಎಂಬ ಉದ್ದೇಶದಿಂದ ನಾನು ಮತ್ತು ನನ್ನ ಅಣ್ಣ ಕೂಡಿಕೊಂಡು ಸುಳ್ಳು ತಕರಾರು ಅರ್ಜಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನ್ಯಾಯಾಲಯದ ಡಿಕ್ರಿ ಪ್ರಕಾರ ನ್ಯಾಯಾಲಯದಿಂದ ನೇಮಕೊಂಡ ನಿಯೋಗಿ ದಿಃ 25.04.2022 ರಂದು ಖರೀದಿ ಪತ್ರವನ್ನು ದರಖಾಸ್ತದಾರರ ಹೆಸರಿಗೆ ನೊಂದ್ ಮಾಡಿಸಿ ಕೊಟ್ಟಿದ್ದಾರೆ ಎಂದರೆ ಸುಳ್ಳು. ದರಖಾಸ್ತದಾರರ ಹೆಸರಿಗೆ ನೊಂದ್ ಆದ ಖರೀದಿ ಪತ್ರ ರದ್ದುಪಡಿಸಲು ಹಾಗೂ ಅಸಲು ದಾವಾ ಸಂಖ್ಯೆ 75/2013 ರಲ್ಲಿ ಆದಂತಹ ತೀರ್ಪು ಮತ್ತು ಡಿಕ್ರಿ ರದ್ದುಪಡಿಸಲು ನಾನು ಕ್ರಮ ಕೈಗೊಂಡಿರುತ್ತೇನೆ.ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂಬ ಪ್ರಶ್ನೆಗೆ ಮುಂದೆ ಕ್ರಮ ಕೈಗೊಳ್ಳುತ್ತೇವೆ ಎಂದು ನುಡಿದಿದ್ದಾರೆ. ಇವತ್ತಿನ ಮಿತಿಗೆ ನಾನು ಕ್ರಮ ಕೈಗೊಂಡ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ.

ನನ್ನ ಸಾಕ್ಷಿ ವಿಚಾರಣೆಯಲ್ಲಿ ನಾನು ದಾವಾ ಜಮೀನಿನ ಸಾಮೂಹಿಕ ಕಬ್ಜೆಯಲ್ಲಿ ಇದ್ದೇನೆ ಎಂದು ಹೇಳಿದ್ದು ಆ ಬಗ್ಗೆ ಉತಾರದಲ್ಲಿ ನನ್ನ ಹೆಸರು ಇದೆ. 2016-17 ರ ದಾವಾ ಜಮೀನಿನ ಉತಾರದಲ್ಲಿ ವಾಟ್ನಿ ಪ್ರಕಾರ ಪರಮೇಶ್ವರ, ಪ್ರೇಮಾ, ನಿಂಗಪ್ಪ, ಉಮಾ, ರೂಪಾ ಮತ್ತು ಮಂಜುನಾಥ ಎಂಬ ಹೆಸರುಗಳು ದಾಖಲಾಗಿವೆ ಎಂದರೆ ಸರಿ. ದಾವೆಯ ಬಗ್ಗೆ ಗೊತ್ತಾದ ನಂತರ ನಾವು 2017 ರಲ್ಲಿ ಮೋಸದಿಂದ ಆಸ್ತಿಗಳಲ್ಲಿ ವಾಟ್ನಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ

ಆಸ್ತಿಯಲ್ಲಿ ನನಗೆ ಕಾನೂನು ಬದ್ದ ಹಕ್ಕು ಪ್ರಾಪ್ತಿ ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು, ನನ್ನ ಸಹೋದರರು ಮತ್ತು ಸಹೋದರಿಯರು ಕೂಡಿಕೊಂಡು ದರಖಾಸ್ತದಾರರಿಗೆ ದಾವಾ ಜಮೀನಿನ ಕಬ್ಜೆ ಹೋಗಬಾರದು ಎಂಬ ಉದ್ದೇಶದಿಂದ ಸುಳ್ಳು ತಕರಾರು ಅರ್ಜಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ)